**ಪಾಟೀಸವಾಲು : ಆರೋಪಿ ಪರ ವಕೀಲರಿಂದ**

ನಾನು ಬಿ.ಎ ವರೆಗೆ ಓದಿರುತ್ತೇನೆ. Raid Squad ನವರು ಪರಸ್ಪರ ಶೋಧನಾ ಮಹಜರನ್ನು ತಯಾರಿಸಿದ್ದಾರೆ ನ್ನುವ ಪ್ರಶ್ನೆಗೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸ್ವವರದಿಯನ್ನು ಏನಾದರೂ ಬರೆದುಕೊಂಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ದಾಳಿಗೆ ಹೋಗುವ ಮೊದಲು ದೂರನ್ನು ದಾಖಲು ಮಾಡಿಕೊಂಡಿರುವುದಿಲ್ಲ. ಆ ದಿನ ಗಾಮನಹಳ್ಳಿ ಗ್ರಾಮದಲ್ಲಿ ಸಹಜವಾದ ಸ್ದಿತಿ ಇದ್ದು ಊರಿನ ಜನರು ಸಾಮಾನ್ಯವಾಗಿ ಓಡಾಡಿಕೊಂಡಿದ್ದರು ಎಂದರೆ ಸರಿ .

ಪೆಟ್ಟಿ ಅಂಗಡಿಯ ಒಳಗಡೆ ಖಾರ ಬಿಸ್ಕೆಟ್ ಹಾಗೂ ಇತ್ಯಾದಿ ವಸ್ತುಗಳು ಇದ್ದವು. ನಿಪಿ 2 ಮತ್ತು 3 ಅನ್ನು ಸಾಕ್ಷಿಗೆ ತೋರಿಸಿ ಇದರಲ್ಲಿ ಖಾರ ಬಿಸ್ಕೆಟ್ ಮತ್ತು ಇತ್ಯಾದಿ ಇರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ಆಗ ಅಂಗಡಿ ಬಾಗಿಲು ಹಾಕಿತ್ತು ಎಂದು ನುಡಿಯುತ್ತಾರೆ .

ದಾಳಿ ಮಾಡಿದಾಗ ಅಂಗಡಿ ತೆಗೆದಿತ್ತು. ಅಂಗಡಿ ತೆರೆದಿದ್ದಾಗ ಫೋಟೊ ತೆಗೆದುಕೊಳ್ಳಲು ನಿಮಗೆ ಏನೂ ತೊಂದರೆ ಇರಲಿಲ್ಲ ಎಂದರೆ ಸರಿ. ನಾವು ಗಲ್ಲಾ ಪೆಟ್ಟಿಗೆ ಯಲ್ಲಿ ಹಣವನ್ನು ಜಪ್ತಿ ಮಾಡಿರುವುದಿಲ್ಲ. ಗಲ್ಲಾ ಪೆಟ್ಟಿಗೆಯಲ್ಲಿ ಹಣ ಇತ್ತೆ ಎನ್ನುವ ಪ್ರಶ್ನೆಗೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾಳಿ ಮಾಡಿದ ಸಂರ್ಭದಲ್ಲಿ ಚುನಾವಣೆ ನಡೆಯುತ್ತಿತ್ತು ಎಂದರೆ ಸರಿ. ನಾವುಗಳು ಚುನಾವಣೆಯ ಪ್ರಭಾವಕ್ಕೆ ಒಳಗಾಗಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಹೇಳಿರುವಂತೆ ಆರೋಪಿತರು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರಿಗೆ ಪಿ. ಎಸ್. ಐ ಸಾಹೇಬರು ನೋಟೀಸ್ ನೀಡಿರುತ್ತಾರೆ. ದಾಳಿಗೆ ಹೋಗಲು ನಾವು 4.30 ಕ್ಕೆ ಪೂರ್ವ ಸಿದ್ದತೆ ಮಾಡಿಕೊಂಡಿರುತ್ತೇವೆ. ನಾನು ನನ್ನ ವೃತ್ತಿಯಲ್ಲಿ ಇರುವ ಅನಭವದಿಂದ ಆಸ್ಪತ್ರೆಯಲ್ಲಿ ಸುಳ್ಳು ಹೀಸ್ಟರಿಯನ್ನು ಹಾಗೂ ಸುಳ್ಳು ಎಂಟ್ರಿಗಳನ್ನು ನೀಡಿರುತ್ತೇನೆಂದರೆ ಸರಿಯಲ್ಲ.

ಪೆಟ್ಟಿ ಅಂಗಡಿ ಅಕ್ಕಪಕ್ಕ ಮನೆಗಳು ಇದ್ದವು ಎಂದರೆ ಸರಿ . ದಾಳಿ ಮಾಡಿದ ಸಂದರ್ಭದಲ್ಲಿ ಜನ ಸಂದಣಿ ಸಾಮಾನ್ಯವಾಗಿತ್ತು. ನಾವುಗಳು ರಾಜಕೀಯ ಪ್ರಭಾವಕ್ಕೆ ಒಳಗಾಗಿ ನಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ ಯಾವುದೇಅಪರಾಧ ನಡೆಯದೇ ಇದ್ದರೂ ಸಹ ಆರೋಪಿತರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.